Rural Ashraya / Basava / Rural Ambedkar / IAY / Urban Ashraya and an amount of Rs. 8.269 crores has been released and Rs. 5.849crores has been spent.

Scheme-wise details are below :

Rural Ashraya	0	0	0
Basava	2726	2.375	2.375
Rural Ambedkar	132	0.213	0.174
IAY	1527	5.034	3.301
Urban Ashraya / Vajapeyee urban housing scheme	290	0.648	0.00
Total	**4675**	**8.270**	**5.850**

No. DOH 189 HAM 2012

(V. Somanna)
Minister for Housing

ಕರ್ನಾಟಕ ವಿಧಾನ ಸಭೆ

432

ಶ್ರೀ ಮಂಜುನಾಥ್ ಹೆಚ್.ಪಿ (ಹುಣಸೂರು)

ಅ) ಮೈಸೂರು ಜಿಲ್ಲೆ ಹುಣಸೂರು ತಾಲ್ಲೂಕಿನ ಗದ್ದಿಗೆ ಹಾಗೂ ಹನಗೂಡಿನ ಕೇಂದ್ರದಲ್ಲಿ ಪೊಲೀಸ್ ಸ್ಟೇಷನ್ ಸ್ಥಾಪಿಸಲು ಸರ್ಕಾರಕ್ಕೆ ಪ್ರಸ್ತಾವನೆ ಬಂದಿರುವುದೇ;

ಆ) ಮೇಲ್ಕಂಡ ಎರಡು ಕೇಂದ್ರಗಳು ತಾಲ್ಲೂಕು ಕೇಂದ್ರದಿಂದ ಬಹುದೂರವಿದ್ದು, ಗಲಾಟೆ ಡಕಾಯಿತಿ, ಕಳ್ಳತನ, ಕಳ್ಳಸಾಗಾಣೆ ಇತ್ಯಾದಿ ದೂರುಗಳು ಬಂದಂತಹ ಸಂದರ್ಭದಲ್ಲಿ ತುರ್ತಾಗಿ ಹಾಜರಿರಲು ಕಷ್ಟಕರವಾಗಿರುತ್ತದೆ ಆದ್ದರಿಂದ ಹೊರ ಠಾಣೆ ಸ್ಥಾಪಿಸುವ ಕುರಿತು ಸರ್ಕಾರದ ಕ್ರಮಗಳೇನು?

ಉಪ ಮುಖ್ಯಮಂತ್ರಿಗಳು ಗೃಹ ಮತ್ತು ಸಾರಿಗೆ

ಅ) ಮೈಸೂರು ಜಿಲ್ಲೆ ಹುಣಸೂರು ತಾಲ್ಲೂಕಿನ ಗದ್ದಿಗೆಯಲ್ಲಿ ಹೊಸದಾಗಿ ಪೊಲೀಸ್ ಹೊರಠಾಣೆಯನ್ನು ತೆರೆಯುವ ಪ್ರಸ್ತಾವನೆ ಸರ್ಕಾರದ

ಪರಿಶೀಲನೆಯಲ್ಲಿದೆ ಹಾಗೂ ಹನಗೂಡಿನಲ್ಲಿ ಉಪಠಾಣೆಯನ್ನು ತೆರೆಯುವ ಯಾವುದೇ ಪ್ರಸ್ತಾವನೆ ಇಲಾಖೆಯ ಮುಂದೆ ಇರುವುದಿಲ್ಲ.

ರಾಜ್ಯದಲ್ಲಿ ಬಹಳಷ್ಟು ಕಡೆ ಪೊಲೀಸ್ ಠಾಣೆ ಹಾಗೂ ಸಂಚಾರಿ ಪೊಲೀಸ್ ಠಾಣೆ ಸ್ಥಾಪನೆ ಮಾಡಲು ಕೋರಿಕೆಗಳು ಇರುತ್ತದೆ. ರಾಜ್ಯದ ಸಂಪನ್ಮೂಲ ಕೊರತೆಯಿಂದ ಒಂದೇ ಹಂತದಲ್ಲಿ ಸ್ಥಾಪಿಸಲು ಸಾಧ್ಯವಾಗುವುದಿಲ. ಹಂತ ಹಂತವಾಗಿ ಸ್ಥಾಪನೆ ಮಾಡಲಾಗುತ್ತದೆ. ಆದ್ದರಿಂದ ಸಂಪನ್ಮೂಲದ ಲಭ್ಯತೆಗೆ ಅನುಗುಣವಾಗಿ ಹಾಗೂ ಆಧ್ಯತೆಯ ಮೇರೆಗೆ ಮೈಸೂರು ಜಿಲ್ಲೆ ಹುಣಸೂರು ತಾಲ್ಲೂಕಿನ ಗದ್ದಿಗೆಯಲ್ಲಿ ಪೊಲೀಸ್ ಹೊರ ಠಾಣೆಯನ್ನು ಸ್ಥಾಪಿಸುವ ಕುರಿತು ಪರಿಶೀಲಿಸಲಾಗುವುದು

ಸಂಖ್ಯೆ : ಹೆಚ್‌ಡಿ 145 ಪಿಓಪಿ 2012

(ಆರ್.ಅಶೋಕ್)
ಉಪ ಮುಖ್ಯಮಂತ್ರಿಗಳು
ಗೃಹ ಮತ್ತು ಸಾರಿಗೆ ಇಲಾಖೆ

ಕರ್ನಾಟಕ ವಿಧಾನ ಸಭೆ
757

ಬಿ.ಎನ್. ವಿಜಯಕುಮಾರ್ (ಜಯನಗರ)

ಅ) ರಾಜ್ಯ ಪೊಲೀಸ್ ಇಲಾಖೆಗೆ ಅವಶ್ಯಕತೆ ಇರುವ ಐ.ಪಿ.ಎಸ್ ಅಧಿಕಾರಿಗಳ ಸಂಖ್ಯೆ ಎಷ್ಟು; ಹಾಲಿ ಇರುವ ಐಪಿಎಸ್ ಅಧಿಕಾರಿಗಳೆಷ್ಟು;

ಆ) ಬೇರೆ ಇಲಾಖೆಗಳಲ್ಲಿ ಎರವಲು ಸೇವೆ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ಐ.ಪಿ.ಎಸ್. ಅಧಿಕಾರಿಗಳೆಷ್ಟು? (ಹೆಸರುಗಳೊಂದಿಗೆ ಇಲಾಖೆವಾರು ಮಾಹಿತಿ ನೀಡುವುದು) ಎರವಲು ಸೇವೆ ಮೇಲೆ ಕಳುಹಿಸಲು ಕಾರಣವೇನು?

ಇ) ಪೊಲೀಸ್ ಇಲಾಖೆಯಲ್ಲಿ ಐಪಿಎಸ್ ಅಧಿಕಾರಿಗಳ ಕೊರತೆ ಇರುವ ಹಿನ್ನಲೆಯಲ್ಲಿ ಎರವಲು ಸೇವೆ ಸಲ್ಲಿಸುತ್ತಿರುವ ಅಧಿಕಾರಿಗಳನ್ನು ಪುನಃ ಹಿಂದಕ್ಕೆ ಕರೆಸಿಕೊಳ್ಳಲು ಕೈಗೊಂಡಿರುವ ಕ್ರಮಗಳೇನು?

ಮುಖ್ಯಮಂತ್ರಿಗಳು

ಅ) ಭಾರತ ಸರ್ಕಾರವು ತನ್ನ ಅಧಿಸೂಚನೆ ಸಂಖ್ಯೆ : 11052/07/2010 ಐ.ಪಿ.ಎಸ್.ಎ – ದಿ : 30.3.2010 ರಲ್ಲಿ ಕರ್ನಾಟಕ